

ರೇಷ್ಮೆ ಸೀರೆಗಳು 'ಎವರ್‌ಗ್ರೀನ್ ಟ್ರೆಂಡ್'. ಹೊಸ ಡಿಸೈನ್, ಬಣ್ಣಗಳು ಆಧುನಿಕ ಮನೋಭಾವದ ಯುವತಿಯರನ್ನು ಆಕರ್ಷಿಸುತ್ತವೆ. ಹಗುರವಾದ, ಸಣ್ಣ ಜರಿ ಬಾರ್ಡರ್ ಇರುವ, ಚಿತ್ತಾಕರ್ಷಕ ವಿನ್ಯಾಸ ಇರುವ ಪಲ್ಲು ಹೊಂದಿದ ಸೀರೆಗಳ ಜನಪ್ರಿಯತೆ ಎಂದಿಗೂ ಮಾಸುವುದೇ ಇಲ್ಲ. ಹೀಗಾಗಿ ಸೀರೆಗಳ ರಾಣಿ ರೇಷ್ಮೆ ಎಂದೆಂದಿಗೂ ಉಡುಪು ಫ್ಯಾಷನ್‌ನಲ್ಲಿ ನಂಬರ್ ವನ್ ಆಗಿಯೇ ಉಳಿದಿದೆ. ಕಾಂಜೀವರಂ, ಉಪ್ಪದ, ಬನಾರಸ್, ಪೈಥಾನಿಸ್, ಜಾರ್ಜೆಟ್, ಶಿಫಾನ್, ಮೈಸೂರು ರೇಷ್ಮೆ ಕೋರಾ ಸಿಲ್ಕ್, ಪ್ರಿಂಟೆಡ್ ಸಿಲ್ಕ್, ಕ್ರೇಪ್, ಧರ್ಮಾವರಂ ಸೀರೆಗಳು ರೇಷ್ಮೆ ಸೀರೆಗಳಲ್ಲಿ ಪ್ರಮುಖವಾದವು. ಜೊತೆಗೆ ಮೊಳಕಾಲ್ಮರು, ಬೆಂಗಳೂರು ಸಿಲ್ಕ್... ಹೀಗೆ ಪ್ರಾದೇಶಿಕವಾಗಿಯೂ ರೇಷ್ಮೆ ಸೀರೆಗಳು ಹೆಸರು ಗಳಿಸಿವೆ.

ಸಾಮಾನ್ಯವಾಗಿ ಹಬ್ಬಗಳಲ್ಲಿ ಉಡಲು ರೇಷ್ಮೆ ಸೀರೆಯೇ ಸೂಕ್ತ. ಒಂದೇ ಸೀರೆ ಮೇಲೆ ಎರಡಕ್ಕಿಂತ ಹೆಚ್ಚು ಶೇಡ್ ಇರುವ ಸೀರೆಗಳನ್ನು ಮಹಿಳೆಯರು ಇಂದು ಹೆಚ್ಚು ಇಷ್ಟಪಡುತ್ತಿದ್ದಾರೆ. ನೋಡಲು ಆಕರ್ಷಕ, ಉಡಲು ಹಗುರ, ಸಾಂಪ್ರದಾಯಿಕತೆಗೆ ಕಿಂಚಿತ್ತೂ ಕುಂದಿಲ್ಲದಂತೆ ಕಾಣುವುದು ಈ ರೀತಿಯ ಸೀರೆಯ ಪ್ಲಸ್ ಪಾಯಿಂಟ್. ಇದರಲ್ಲಿ ಗಾಢ ಬಣ್ಣದ ಸೀರೆಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಬಣ್ಣದಲ್ಲಿ ಕೊಂಚ ಕಪ್ಪು ಇರುವವರಿಗೆ ತಿಳಿ ಬಣ್ಣದ ಸೀರೆಗಳು ಸೂಕ್ತವೆನಿಸುತ್ತವೆ.

## ಹಬ್ಬಕ್ಕೆ ಬೇಕು ರೇಷ್ಮೆ ಸೀರೆ!

ಸೀರೆಯಲ್ಲೂ ಅದೆಷ್ಟು ವೈವಿಧ್ಯ! ಮಹಿಳೆಯರನ್ನು ಕೈಬೀಸಿ ಕರೆಯುವ ಇಕತ್ ಸೀರೆ, ಚಂದದ ಚಂದೇರಿ ಸೀರೆ, ಸೀಕ್ವೆನ್ಸ್ ಸಿರೀಸ್‌ನಂತಿರುವ ಇಳಕಲ್ ಸೀರೆ, ಶುಭಕಾರ್ಯಗಳಿಗೆ ಬಳಸಲೆಂದೇ ಇರುವ ಮಂಗಳಗಿರಿ ಸೀರೆ, ಫ್ಯಾಷನ್‌ಪ್ರಿಯರಿಗಾಗಿಯೇ ಬಂದಿರುವ ಬೊಮ್ಮಾಯ್ ಸೀರೆ, ಅಂದಗೆಡದ ಕುಂದಲಮ್ ಸೀರೆ... ಹತ್ತಾರು ಬಣ್ಣಗಳ ನೂರಾರು ವಿನ್ಯಾಸ ವೈವಿಧ್ಯಗಳ ಸೀರೆಗಳು ಅಲ್ಮೆರಾ ತುಂಬ ಇದ್ದರೂ ಅಪ್ಪಟ ರೇಷ್ಮೆ ಸೀರೆ ಇಲ್ಲವಲ್ಲ ಎಂಬ ಕೊರಗು ಮಹಿಳೆಯರಲ್ಲಿ ಇದ್ದೇ ಇದೆ. ರೇಷ್ಮೆ ಸೀರೆಯ ವೈಭವ, ವೈಯ್ಯಾರವೇ ಅಂಥದ್ದು. ಅಪ್ಪಟ ಮೈಸೂರು ರೇಷ್ಮೆ, ಬನಾರಸ್, ಕಾಂಜೀವರಂ ಸೀರೆಗಳು ಶತಮಾನಗಳ ಇತಿಹಾಸ ಹೊಂದಿದ್ದು, ಇನ್ನು ಎಷ್ಟು ವರ್ಷ ಕಳೆದರೂ ತನ್ನ ಜನಪ್ರಿಯತೆ ಕಳೆದುಕೊಳ್ಳುವುದೇ ಇಲ್ಲ.

## ಅಗಲ ಪಲ್ಲುವಿನ ಡಿಸೈನರ್ ಸೀರೆ

ಹಿಂದೆಲ್ಲ ಬನಾರಸ್, ಕಾಂಜೀವರಂ ಸೀರೆ ಉಡುವಾಗ ಅಗಲವಾದ ಜರಿ ಬಾರ್ಡರ್ ಇರುವುದಕ್ಕೇ ಹೆಚ್ಚು ಆದ್ಯತೆ ನೀಡುತ್ತಿದ್ದರು. ಇದೀಗ ಅಗಲ ಪಲ್ಲು ಇರುವ ಸೀರೆಯಾದರೂ ಹೆಚ್ಚು ಜರಿ ಇರುವ ಗಾಢ ವರ್ಣದ ಮೇಲೆ ಗೋಲ್ಡನ್ ಬಾರ್ಡರ್ ಇರುವ ಸೀರೆಗಳನ್ನೇ ಮಹಿಳೆಯರು ಇಷ್ಟಪಡುತ್ತಿದ್ದಾರೆ. ಜೊತೆಗೆ ಈಗ ಪ್ರಿಂಟೆಡ್ ಸೀರೆಗಳ ಮೇಲೆ ಮಮತೆ ಹೆಚ್ಚಾಗಿದೆ. ಅದರಲ್ಲೂ ಗೋಲ್ಡನ್ ಪ್ರಿಂಟೆಡ್, ಡಾಟೆಡ್, ಸೀಕ್ವೆನ್ಸ್ ಡಿಸೈನ್ಸ್, ಫ್ಲವರ್ ಡಿಸೈನ್ ರೇಷ್ಮೆ ಸೀರೆಗಳು ಹೆಚ್ಚು ಜನಪ್ರಿಯವಾಗುತ್ತಿವೆ. ಡಾರ್ಕ್ ಶೇಡ್ ಸೀರೆಗೆ ಕಾಂಟ್ರಾಸ್ಟ್ ಆಗಿ ಗೋಲ್ಡನ್ ಕಲರ್ ಬ್ಲೌಸ್‌ಗಳು ಬಹಳ ಸೂಕ್ತವಾಗಿ ಒಪ್ಪುತ್ತದೆ. ಇದು ಸ್ಟೈಲ್ ಆಗಿಯೂ, ಟ್ರೆಂಡಿ ಆಗಿಯೂ ಇದ್ದು ಪ್ಲೆಸೆಂಟ್ ಲುಕ್ ಕೊಡುತ್ತದೆ. ಇಂಥ ಸೀರೆ ಉಟ್ಟಾಗ ಒಂದೇ ಒಂದು ಚೋಕರ್ ಅಥವಾ ನೆಕ್ಲೇಸ್ ಹಾಕಿಕೊಂಡರೆ ಸಾಕು. ತಿಳಿಯಾದ ಮೇಕಪ್ ಮಾಡಿಕೊಂಡರೆ ಶೃಂಗಾರವೇ ಮುಗಿದಂತೆ. ಮದುವೆ, ಮುಂಜಿಯಂಥ ಸಮಾರಂಭಗಳಲ್ಲಿ ಸಖತ್ ಆಗಿ ಮಿಂಚಬಹುದು.

## ಮೈಸೂರು ರೇಷ್ಮೆ ಮರೆಯಲುಂಟೇ?

ರೇಷ್ಮೆ ಸೀರೆಗಳಿಗೆ ಮುಕುಟದಂತಿರುವ ಮೈಸೂರು ಸಿಲ್ಕ್, (ಕೆಎಸ್‌ಐಸಿ) ಸೀರೆಗಳನ್ನು ಎಂದಾದರೂ ಮರೆಯಲಾದೀತೆ? ಮೈಸೂರಿನಲ್ಲಿ ರಾಜಮನೆತನದ ಶ್ರೀಮಂತ ಪರಂಪರೆಯಿಂದ 'ರೇಷ್ಮೆ ರಾಣಿ' ಎಂದು ಸಾಬೀತಾದ ಮೈಸೂರು ರೇಷ್ಮೆ ಸೀರೆಗಳು ಯುವತಿಯರ ಮೆಚ್ಚು ಆಗಿದೆ. ಕೈಕುಸುರಿಯಿಂದ ಕೂಡಿದ ಹದವಾಗಿ ನೇಯ್ದ ನುಣುಪಾದ ರೇಷ್ಮೆ ಸೀರೆ ಉಡಲು ಎಂದಿಗೂ ಖುಷಿಯೇ. ನಾಜೂಕಾದ ಜರಿಯಿಂದ ಕೂಡಿದ ಪಾರಂಪರಿಕ ಸೀರೆ ವೈಭವದ ಸಂಕೇತವೂ ಹೌದು. ಇದನ್ನು ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ಒಂದು ಶತಮಾನದಿಂದ ಈಚೆಗೆ ಕಾಯ್ದುಕೊಳ್ಳುತ್ತಾ ಬಂದಿದೆ. ಶ್ರೀಗಂಧದ ಕಂಪಿನ ನೆಲೆಯಲ್ಲಿ ಶುದ್ಧ ಚಿನ್ನದ ಜರಿಯೊಂದಿಗೆ ಪರಿಪೂರ್ಣ ಶುದ್ಧ ರೇಷ್ಮೆಯನ್ನು ಉತ್ಪಾದಿಸುತ್ತಾ ಬಂದಿರುವ ಕೆಎಸ್‌ಐಸಿ, ರೇಷ್ಮೆ ಸೀರೆ ಎಂದರೆ ಮೈಸೂರು ರೇಷ್ಮೆ ಎನ್ನುವಷ್ಟರ ಮಟ್ಟಿಗೆ ಖ್ಯಾತಿ ಗಳಿಸಿದೆ.

ಆಧುನಿಕ ಮನೋಭಾವದ ಯುವತಿಯರು, ಅಧ್ಯಾಪಕಿಯರು, ಸೆಲೆಬ್ರಿಟಿಗಳು ರೇಷ್ಮೆ ಸೀರೆಗೆ ಮಾರುಹೋಗಿದ್ದಾರೆ. ರೇಷ್ಮೆ ಸೀರೆಯಲ್ಲೂ ಹಲವು ವೈವಿಧ್ಯಮಯ ವಿನ್ಯಾಸದವು ಲಭ್ಯ. ಎಂಬ್ರಾಯಿಡರಿ ಮಾಡಿದ ರವಿಕೆಗಳು ಕೂಡ ರೇಷ್ಮೆ ಸೀರೆಯ ಅಂದ ಹೆಚ್ಚಿಸುತ್ತದೆ. ■

## ಹೊಸತು ಹೊಸತು!

ಸಾಂಪ್ರದಾಯಿಕ ರೇಷ್ಮೆ ಸೀರೆಗಳು ಎಷ್ಟೇ ವರ್ಷ ಕಳೆದರೂ ತನ್ನ ಅಂದ, ಬೇಡಿಕೆ ಕಳೆದುಕೊಳ್ಳುವುದೇ ಇಲ್ಲ. ಇಂಥ 'ಕ್ಲಾಸಿಕಲ್ ಸೀರೆ'ಗಳು ಪರಂಪರೆಯಿಂದ ಬಂದುದು. ಅಲ್ಲದೆ ರೇಷ್ಮೆ ಸೀರೆಗಳು ಎಂದೆಂದೂ ತಾಜಾತನ, ತನ್ನತನ ಬಿಟ್ಟುಕೊಡುವುದೂ ಇಲ್ಲ. ಕಾಂಜೀವರಂ ಸೀರೆಯಲ್ಲಿ ಇದೀಗ ಪ್ರಿಂಟೆಂಡ್ ಸೀರೆಗಳು ಬಂದಿದ್ದು, ಬಹುಬೇಡಿಕೆ ಗಳಿಸಿದೆ. ಅಲ್ಲದೆ ಬಾಂದನಿ ಸೀರೆಗಳಲ್ಲಿ 'ಟೈ ಅಂಡ್ ಡೈ' ಸೀರೆಗಳು ರೇಷ್ಮೆ ಸೀರೆಗಳಿಗೆ ಹೊಸ ಸೇರ್ಪಡೆ ಎನಿಸಿದೆ' ಎನ್ನುತ್ತಾರೆ 'ವಿಜಯಲಕ್ಷ್ಮಿ ಸಿಲ್ಕ್ಸ್' ಮಳಿಗೆಯಲ್ಲಿ ಉದ್ಯಮಿಯಾಗಿರುವ ಅಭಿಷೇಕ್.

'ಅಲ್ಲದೆ ಟ್ರೆಂಡಿ ಸೀರೆಗಳ ಜನಪ್ರಿಯತೆ ಹಾಗೂ ಬೇಡಿಕೆಯನ್ನು ಆಧರಿಸಿ 'ಪ್ರಿಂಟೆಡ್ ಕಂಚಿ ಹಾಗೂ ಬಾಂದನಿ ಬನಾರಸಿ' ಎಂಬ ಹೊಸ ವಿನ್ಯಾಸದ ರೇಷ್ಮೆ ಸೀರೆಗಳನ್ನು ನವರಾತ್ರಿ ಹಾಗೂ ಇತರ ಹಬ್ಬಗಳ ಸಲುವಾಗಿಯೇ ತಂದಿದ್ದೇವೆ. ಜೊತೆಗೆ ಟಸ್ಸಾರ್ ಪ್ಯೂರ್ ಸಿಲ್ಕ್‌ನಲ್ಲಿ ಚಿಕನ್ ವರ್ಕ್ ಇರುವ ಸೀರೆಗಳನ್ನು ಹೊಸ ಟ್ರೆಂಡಿ ಸೀರೆಗಳ ಸಾಲಿಗೆ ಸೇರಿಸಿದ್ದು, ಮಹಿಳೆಯರಿಂದ ಬಹಳ ಉತ್ತಮ ಪ್ರತಿಕ್ರಿಯೆ ಬರುತ್ತಿದೆ' ಎಂದು ಹೇಳುತ್ತಾರೆ ಅಭಿಷೇಕ್.

'ಅಪ್ಪಟ ರೇಷ್ಮೆ ಸೀರೆಗಳಲ್ಲೂ ಪ್ರತಿವರ್ಷ ಹೊಸ ಹೊಸ ವೈವಿಧ್ಯ ಫ್ಯಾಷನ್ ಲೋಕಕ್ಕೆ ಎಂಟ್ರಿ ಆಗುತ್ತಲೇ ಇರುತ್ತವೆ ಎನ್ನುವ ಅವರು, ಕಳೆದ ವರ್ಷ ಹಬ್ಬದ ಸೀಸನ್‌ಗಾಗಿ ಹೊರತಂದ ಸಿಲ್ವರ್ ಹಾಗೂ ಸಿಲ್ವರ್ ಗೋಲ್ಡ್ ಸೀರೆಗಳು ಫ್ಯಾಷನಬಲ್ ಎಂದು ಹೆಸರು ಗಳಿಸಿತ್ತು. ರೇಷ್ಮೆ ಸೀರೆಗಳಲ್ಲಿ ಒಮ್ಮೆ ಟ್ರೆಂಡಿ ಎನ್ನುವಂಥದ್ದು ಬಂದರೆ ಅದು ಕನಿಷ್ಠ ಮೂರ್ನಾಲ್ಕು ವರ್ಷವಾದರೂ ಫ್ಯಾಷನ್ ಆಗಿಯೇ ಉಳಿಯುತ್ತದೆ ಎನ್ನುತ್ತಾರೆ. 'ಆಧುನಿಕ ಮನೋಭಾವದ, ಕಾಲೇಜು ಹುಡುಗಿಯರು, ಉದ್ಯೋಗಸ್ಥ ಯುವತಿಯರು ಹೆಚ್ಚಾಗಿ ಹಗುರವಾದ, ಹೆಚ್ಚು ವರ್ಕ್ಸ್ ಹಾಗೂ ಕಸೂತಿ ಇರುವ ಸೀರೆಗಳನ್ನೇ ಅಪೇಕ್ಷೆ ಪಡುತ್ತಾರೆ. ಜೊತೆಗೆ ಪ್ರಿಂಟೆಡ್ ಕಂಚಿ, ಕೋರಾ ಕಂಚಿ, ಸಾಫ್ಟ್ ಸಿಲ್ಕ್ ಡಿಸೈನ್ ಕಾಂಬಿನೇಷನ್ ಇರುವ ಸೀರೆಗಳನ್ನೇ ಬಯಸುತ್ತಾರೆ. ಏನೇ ಆದರೂ ಸಾಂಪ್ರದಾಯಿಕ ಕಾಂಜೀವರಂ, ಬನಾರಸ್ ಸೀರೆಗಳು ತನ್ನ ಆಕರ್ಷಣೆ ಕಳೆದುಕೊಳ್ಳುವುದೇ ಇಲ್ಲ' ಎಂಬುದು ಇವರ ಅನಿಸಿಕೆ.